ಹರಿಯುತ್ತಿದ್ದ ಗಂಗಾ ನದಿಯ ಕಲರವ ಕಿವಿಯನ್ನು ಸಣ್ಣದಾಗಿ ತುಂಬಿಕೊಳ್ಳುತ್ತಿದ್ದುದ್ದರ ಜೊತೆಗೆ ಘಾಟ್‌ನಲ್ಲಿ ಸುಡುತ್ತಿದ್ದ ಹೆಣಗಳ ವಾಸನೆ ಹೋಮಕುಂಡದಲ್ಲಿ ಅರಳುತ್ತಿದ್ದ ಕೆಂಡಗಳಿಂದ ಉತ್ಪತ್ತಿಯಾಗುತ್ತಿದ್ದ ಹೊಗೆಯೊಂದಿಗೆ ಮಿಳಿತವಾಗಿ ಘಾಟು ಘಾಟಾಗಿ ಮೂಗಿಗೆ ಅಡರುತ್ತಿತ್ತು. ನಡುಮನೆಗೆ ಅಭಿಮುಖವಾಗಿ ನಾಲ್ಕು ರೂಮುಗಳಿದ್ದವು. ನಾವು ಕುಳಿತಿದ್ದ ಎಡಬದಿಯ ರೂಮಿನೊಳಕ್ಕೆ ಹೋದ ಅನುಯಾಯಿ ನಿಮಿಷಾರ್ಧದಲ್ಲಿ ಎರಡು ಕಪ್ಪುಗಳಲ್ಲಿ ಹೊಗೆಯಾಡುತ್ತಿದ್ದ ಗಿಡಮೂಲಿಕೆಗಳ ಕಷಾಯವನ್ನು ಹಿಡಿದು ಬಂದಿದ್ದ. ಬಾಬಾ ಧಾತುಸೇನರ ಬಗ್ಗೆ ರಾಘವ ಪಂತುಲು ಈಗಾಗಲೇ ಸಂಕ್ಷಿಪ್ತವಾಗಿ ಹೇಳಿದ್ದರು. ಕೆಮಿಕಲ್ ಎಂಜಿನಿಯರಿಂಗ್ ಮತ್ತು ಬಯೋಟೆಕ್ನಾಲಜಿ ಎರಡರಲ್ಲೂ ವಿದೇಶದಲ್ಲಿ ಎಂ.ಎಸ್. ಮಾಡಿದ್ದ ಧಾತುಸೇನ ಇಂಡಿಯಾಕ್ಕೆ ಹಿಂತಿರುಗಿ ಕೆಲವೇ ವರ್ಷಗಳಲ್ಲಿ ಅಪಾರ ಸಂಪತ್ತನ್ನು ಗಳಿಸಿದರಂತೆ. ನೂರಾರು ಬಾರಿ ಪ್ರಪಂಚ ಪರ್ಯಟನೆ ಮಾಡಿದರಂತೆ. ಆದರೆ ಆರು ವರ್ಷಗಳ ಹಿಂದೆ ತಮ್ಮ ಐವತ್ತನಾಲ್ಕನೆಯ ವಯಸ್ಸಿನಲ್ಲಿ ಇದ್ದಕ್ಕಿದ್ದಂತೆ ಎಲ್ಲವನ್ನೂ ಬಿಟ್ಟು ಇಲ್ಲಿಗೆ ಬಂದು ನೆಲೆಸಿರುವರಂತೆ. ಆಗರ್ಭ ಶ್ರೀಮಂತರಾಗಿರುವ ಹೆಂಡತಿ, ಮಕ್ಕಳು ಈಗಲೂ ಆಗಾಗ ಬಂದು ಕರೆದುಕೊಂಡು ಹೋಗಲು ಪ್ರಯತ್ನಿಸಿ ಬರಿಗೈಲಿ ಹೋಗುತ್ತಾರಂತೆ.

'ಇನ್ನೊಂದೆರಡು ನಿಮಿಷ, ಬಾಬಾ ಊಟ ಬಿಡುತ್ತಿರುವ ಪ್ರಕ್ರಿಯೆಯನ್ನು ಮುಗಿಸುತ್ತಿದ್ದಾರೆ...' ಎಂದು ನಸುನಕ್ಕ ಅನುಯಾಯಿ ಕಷಾಯದ ಖಾಲಿ ಕಪ್ಪುಗಳನ್ನು ಹಿಡಿದು ಅದೇ ರೂಮಿನೊಳಕ್ಕೆ ಹೊಕ್ಕಿದ್ದ. ಆತನ ಮಾತುಗಳ ತಲೆಬುಡ ನನಗೆ ಅರ್ಥವಾಗಿರಲಿಲ್ಲ. ನೀಲಾಂಜನ ಕೂಡ ಪ್ರಶ್ನಾರ್ಥಕವಾಗಿ ನನ್ನ ಕಡೆ ನೋಡಿದ್ದಳಲ್ಲದೆ ಬಾಬಾ ಧಾತುಸೇನರ ಬಗ್ಗೆ ಅಪರಿಮಿತವಾದ ಕುತೂಹಲ ತುಂಬಿಕೊಂಡಿರುವಂತೆ ಕಾಣುತ್ತಿದ್ದಳು. ಅನುಯಾಯಿ ಹೊಕ್ಕ ಕೋಣೆಯ ಬಾಗಿಲು ಮುಚ್ಚಿಕೊಳ್ಳುವುದರೊಂದಿಗೆ ಬಾಬಾ ಧಾತುಸೇನರ ಕಣ್ಣುಗಳು ತೆರೆದುಕೊಂಡಿದ್ದವು.

'ವೆಲ್‌ಕಮ್ ಟು ದಿ ಹೋಟೆಲ್ ಆಫ್ ಡೆತ್...' ಕೆಂಪಡರಿದ ಅವರ ತೀಕ್ಷ್ಣವಾದ ಕಣ್ಣುಗಳಿಂದ ಸೋರಿ ಬಂದಂತಿತ್ತು ಧ್ವನಿ. ನಾವು ಏನು ಮಾತನಾಡಬೇಕೆಂದು ತಡಕಾಡುತ್ತಿರುವಾಗ ಅವರೇ ಮಾತನಾಡಿದ್ದರು: 'ಕನ್‌ಫ್ಯೂಸ್ ಆಗಬೇಡಿ ಈ ಬನಾರಸ್ ನಗರವನ್ನು ಸಾವಿನ ಹೋಟೆಲ್ ಎಂದೇ ಕರೆಯುವುದು. ದೇಶದ ಮೂಲೆ ಮೂಲೆಗಳಿಂದ ಅಲ್ಲದೆ ಕೆಲವು ವಿದೇಶಗಳಿಂದಲೂ ಜನ ಬಂದು ಇಲ್ಲೆ ಪ್ರಾಣ ಬಿಡಲು ಬಯಸುತ್ತಾರೆ. ಇಲ್ಲಿ ಪ್ರಾಣಬಿಟ್ಟರೆ ಮೋಕ್ಷ ಸಿಗುತ್ತದೆಂದೋ ಅಥವಾ ಸ್ವರ್ಗ ಪ್ರಾಪ್ತಿಯಾಗುತ್ತದೆಂದೋ ಜನರ ನಂಬಿಕೆಯಿರಬೇಕು. ಆದರೆ ಪ್ರಾಣಬಿಡುವುದು ಕೂಡ ಎಷ್ಟು ಘನಘೋರವಾದ ಕೆಲಸವೆಂಬುದು ಮುಕ್ತಿಧಾಮಗಳಿಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಸ್ವರ್ಗಕ್ಕೆ ಹೋಗುವ ಮೊದಲು ನರಕದ ಹಾದಿ! ಹಸಿವು ಮತ್ತು ಕಾಮ ಸಂಪೂರ್ಣವಾಗಿ ಕಮರಿ ಹೋದಾಗ ಮನುಷ್ಯ ಸಾಯಲು ಕ್ಯೂ ನಿಲ್ಲುತ್ತಾನೆ. ಜಗತ್ತಿನಾದ್ಯಂತ ನಡೆಯುವ ಆತ್ಮಹತ್ಯೆಗಳ ಜಾಡನ್ನು ಹಿಡಿದುಹೋದರೆ ಕೊನೆಯಲ್ಲಿ ಕಾಣುವುದು ಖಂಡಿತವಾಗಿಯೂ ಇವೆರಡೇ ಸಂಗತಿಗಳು...' ಅನೇಕ ವರ್ಷಗಳ ಪರಿಚಯವಿರುವವರೊಂದಿಗೆ ಮಾತನಾಡುತ್ತಿರುವಂಥ ಕ್ಲೋಸ್‌ನೆಸ್ ಇತ್ತು ಅವರ ಮಾತುಗಳಲ್ಲಿ.

'ನೀವು ಊಟ ಬಿಡುತ್ತಿರುವುದರ ಬಗ್ಗೆ ನಿಮ್ಮ ಅನುಯಾಯಿ ಹೇಳಿದರು. ಆದರೆ ನಿಮ್ಮ ಮುಂದೆ ಯಾವುದೇ ತರದ ಆಹಾರ ಪದಾರ್ಥವಾಗಲೀ, ದ್ರವವಾಗಲೀ ಇಲ್ಲ. ಉಪವಾಸ